# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1036**
ಸದಸ್ಯರ ಹೆಸರು : **ಶ್ರೀ. ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ)**
ಉತ್ತರಿಸುವ ದಿನಾಂಕ : 29/09/2020
ಉತ್ತರಿಸುವ ಸಚಿವರು : **ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**

| | ಪ್ರಶ್ನೆ | ಉತ್ತರ |
|---|---|---|
| ಅ | ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸುವ ಸಂದರ್ಭದಲ್ಲಿ ಅನುಸರಿಸುವ ನಿಯಮಗಳೇನು; | ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುವುದು.<br>• ಗ್ರಾಮ ಪಂಚಾಯಿತಿ ಪ್ರದೇಶದ ಜನಸಂಖ್ಯೆಯು 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು.<br>• ಅಂತಹ ಪ್ರದೇಶದ ಜನಸಂಖ್ಯೆಯು ಜನಸಾಂದ್ರತೆಯು ಆ ಪ್ರದೇಶದ ಒಂದು ಚ.ಕಿ.ಮೀ ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು.<br>• ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ ಶೇ. 50 ಕ್ಕಿಂತ ಕಡಿಮೆ ಇಲ್ಲದಿರುವುದು.<br>ದಿನಾಂಕ:19/03/2015 ರ ಸಚಿವ ಸಂಪುಟ ಸಭೆಯ ತೀರ್ಮಾನದಂತೆ, 2011 ರ ಜನಗಣತಿಯನ್ವಯ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ. |
| ಆ | ಕಳೆದ 02 ವರ್ಷಗಳಲ್ಲಿ ರಾಜ್ಯಾದ್ಯಂತ ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು) | ಕಳೆದ 2 ವರ್ಷದಲ್ಲಿ 10 ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ವಿವರ ಕೆಳಕಂಡಂತಿದೆ. |

| | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯಿತಿ | ಪಟ್ಟಣ ಪಂಚಾಯಿತಿ |
|---|---|---|---|---|
| 1 | ಯಾದಗಿರಿ | ಹುಣಸಗಿ | ಹುಣಸಗಿ | ಹುಣಸಗಿ |
| 2 | ಹಾವೇರಿ | ರಟ್ಟಿಹಳ್ಳಿ | ರಟ್ಟಿಹಳ್ಳಿ | ರಟ್ಟಿಹಳ್ಳಿ |
| 3 | ದಕ್ಷಿಣ ಕನ್ನಡ | ಕಡಬ | ಕಡಬ | ಕಡಬ |
| 4 | ಚಿಕ್ಕಮಗಳೂರು | ಅಜ್ಜಂಪುರ | ಅಜ್ಜಂಪುರ | ಅಜ್ಜಂಪುರ |
| 5 | ವಿಜಯಪುರ | ತಿಕೋಟಾ | ತಿಕೋಟಾ | ತಿಕೋಟಾ |
| 6 | ಕಲಬುರಗಿ | ಕಮಲಾಪೂರ | ಕಮಲಾಪೂರ | ಕಮಲಾಪೂರ |
| 7 | ಕಲಬುರಗಿ | ಚಿತ್ತಾಪುರ | ಕಾಳಗಿ | ಕಾಳಗಿ |
| 8 | ಉಡುಪಿ | ಬೈಂದೂರು | ಬೈಂದೂರು, | ಬೈಂದೂರು |
| 9 | ಕಲಬುರಗಿ | ಜೇವರ್ಗಿ | ಯಡ್ರಾಮಿ | ಯಡ್ರಾಮಿ |
| 10 | ದಾವಣಗೆರೆ | ಹೊನ್ನಾಳಿ | ನ್ಯಾಮತಿ | ನ್ಯಾಮತಿ |

| | | |
|---|---|---|
| ಇ | ಬಾಗಲಕೋಟೆ ಜಿಲ್ಲೆಯ ಎಷ್ಟು ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಮನವಿಗಳು ಸ್ವೀಕೃತವಾಗಿವೆ; (ಸಂಪೂರ್ಣ ವಿವರ ನೀಡುವುದು) | ಬಾಗಲಕೋಟೆ ಜಿಲ್ಲೆಯಲ್ಲಿ 7 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿಯನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸ್ವೀಕೃತವಾಗಿರುತ್ತದೆ.<br>**1.ಮುಧೋಳ ತಾಲ್ಲೂಕಿನ ಲೋಕಾಪೂರ ಗ್ರಾಮ ಪಂಚಾಯಿತಿ:**<br>ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿ |

| | | |
|---|---|---|
| | | ದಿನಾಂಕ:23/09/2020 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ.<br>**2.ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮ ಪಂಚಾಯಿತಿ:** ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಮೇಲಿನ ಪ್ರಶ್ನೆಯಲ್ಲಿ (ಪ್ರಶ್ನೆ-ಅ) ತಿಳಿಸಿರುವಂತೆ, ಅರ್ಹತೆಯನ್ನು ಹೊಂದಿರುವುದಿಲ್ಲ.<br>**3.ಹುನುಗುಂದ ತಾಲ್ಲೂಕಿನ ಸೂಳೇಭಾವಿ ಗ್ರಾಮ ಪಂಚಾಯಿತಿ:** ಕರ್ನಾಟಕ ಪುರಸಭೆ ಅಧಿನಿಯಮ 1964 ಕಲಂ 349 ರಲ್ಲಿ ನಿಗದಿಪಡಿಸಿದ ಮಾನದಂಡಗಳ ಅರ್ಹತೆ ಹೊಂದಿರುವುದಿಲ್ಲ.<br>**4.ಇಲಕಲ್ಲ ತಾಲ್ಲೂಕಿನ ಗುಡೂರ ಗ್ರಾಮ ಪಂಚಾಯಿತಿ:** ಗುಡೂರು ಎಸ್.ಸಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಿಂದ ಸ್ವೀಕರಿಸಲಾಗಿದ್ದು, ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br>**5. ಮುಧೋಳ ತಾಲ್ಲೂಕಿನ ಶಿರೋಳ ಗ್ರಾಮ ಪಂಚಾಯಿತಿ:** ಶಿರೋಳ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ಪೌರಾಡಳಿತ ನಿರ್ದೇಶನಾಲಯದಿಂದ ಸ್ವೀಕರಿಸಲಾಗಿದ್ದು, ನಿಯಮಾನುಸಾರ ಪರಿಶೀಲಿಸಲಾಗುತ್ತಿದೆ.<br>**6&7. ತಾಲ್ಲೂಕಿನ ಶಿರೂರು ಮತ್ತು ನೀಲಾನಗರ ಗ್ರಾಮ ಪಂಚಾಯಿತಿಗಳು:** ಶಿರೂರು ಮತ್ತು ನೀಲಾನಗರ ಗ್ರಾಮ ಪಂಚಾಯಿತಿಗಳನ್ನು ಒಟ್ಟುಗೂಡಿಸಿ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿ, ದಿನಾಂಕ:09/11/2020 ರಂದು ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ. |
| ಈ | ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬಾಗಲಕೋಟೆ ತಾಲ್ಲೂಕಿನ "ಕಲಾದಗಿ" ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>2011 ರ ಜನಗಣತಿಯನುಸಾರ ಕಲಾದಗಿ ಗ್ರಾಮ ಪಂಚಾಯಿತಿಯ ಜನಸಂಖ್ಯೆಯು 13,675 ಇರುತ್ತದೆ. ದಿ: 19.03.2015 ರ ಸಚಿವ ಸಂಪುಟ ಸಭೆಯ ನಿರ್ಣಯದಂತೆ 15,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗಿರುತ್ತದೆ. |
| ಉ | ಹಾಗಿದ್ದಲ್ಲಿ, ಸದರಿ ಗ್ರಾಮ ಪಂಚಾಯಿತಿ ಯನ್ನು "ಪಟ್ಟಣ ಪಂಚಾಯಿತಿ" ಯನ್ನಾಗಿ ಇಲ್ಲಿಯವರೆಗೂ ಮೇಲ್ದರ್ಜೆಗೇರಿಸದಿರಲು ಕಾರಣಗಳೇನು; | |
| ಊ | ಯಾವ ಕಾಲಮಿತಿಯಲ್ಲಿ "ಪಟ್ಟಣ ಪಂಚಾಯಿತಿ" ಯನ್ನಾಗಿ ಮೇಲ್ದರ್ಜೆಗೇರಿಸಲಾಗುವುದು? | ಅನ್ವಯಿಸುವುದಿಲ್ಲ. |

**ಸಂಖ್ಯೆ:ನಅಇ 38 ಎಲ್ ಸಿಕ್ಯೂ 2020.**

(ನಾರಾಯಣ ಗೌಡ)

**ಪೌರಾಡಳಿತ ಹಾಗೂ ತೋಟಗಾರಿಕೆ ಮತ್ತು ರೇಷ್ಮೆ ಸಚಿವರು**